ಇ) ನೇಮಕಾತಿ ಆಗಿ ತರಬೇತಿ ಹೊಂದಿರುವ ಸಬ್ ಇನ್ಸ್‌ಪೆಕ್ಟರ್‌ಗಳ ಕೆಎಟಿ ಆದೇಶದನ್ವಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಇವರನ್ನು ಯಾವಾಗ ಹುದ್ದೆಗಳಲ್ಲಿ ನಿಯೋಜಿಸಲಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಹೌದು

ಆ) ಪಿಎಸ್‌ಐಗಳ ನೇಮಕಾತಿ ಪಟ್ಟಿಯನ್ನು ಶೇಕಡಾ 50ರಷ್ಟು ಮೀಸಲಾತಿಗೆ ಒಳಪಡಿಸಿ ಪುನಃ ತಯಾರಿಸುವಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಆದೇಶಿಸಿದೆ. ಅದರಂತೆ ಎಲ್ಲಾ ಅಭ್ಯರ್ಥಿಗಳ ಹೊಸ ಪಟ್ಟಿ ತಯಾರಿಸಬೇಕಾಗಿದ್ದು, ಅದರಲ್ಲಿ ತರಬೇತಿಯಲ್ಲಿರುವ ಸಬ್-ಇನ್ಸ್‌ಪೆಕ್ಟರ್‌ಗಳೂ ಮರುಪರಿಶೀಲನೆಗೆ ಒಳಪಡುತ್ತಾರೆ. ಹೊಸ ಪಟ್ಟಿಯಲ್ಲಿ ಮೀಸಲಾತಿಯ ನಿರ್ಬಂಧದಿಂದ ಸೇರ್ಪಡೆಯಾಗದಿದ್ದರೆ ಅಂತಹವರ ನೇಮಕಾತಿ ರದ್ದಾಗುತ್ತದೆ.

ಇ) ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ರಿವ್ಯೂ ಅರ್ಜಿ ಸಲ್ಲಿಸಿದ್ದು, ಇದು ತಿರಸ್ಕೃತಗೊಂಡಿದೆ. ಸುಪ್ರೀಂ ಕೋರ್ಟಿನಲ್ಲಿ ಎಸ್‌ಎಲ್‌ಪಿ ಸಲ್ಲಿಸಿ ತಡೆಯಾಜ್ಞೆ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಕೆ.ಎ.ಟಿ. ಆದೇಶದಂತೆ ನೇರ ನೇಮಕಾತಿಗಾಗಿ ಶೇಕಡಾ 50ರಷ್ಟು ಮೀಸಲಾತಿಗೆ ಒಳಪಡುವ ಆದೇಶವನ್ನು ಹೊರಡಿಸುವಂತೆ ಸಮಾಜ ಕಲ್ಯಾಣ ಇಲಾಖೆಯನ್ನು ಕೋರಲಾಗಿದೆ. ಹಾಗೂ ಪಿಎಸ್‌ಐಗಳ ಹೊಸ ನೇಮಕಾತಿ ಪಟ್ಟಿ ತಯಾರಿಸಲು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಿಂದ ಮೂರು ತಿಂಗಳ ಕಾಲಾವಕಾಶವನ್ನು ಪಡೆಯಲಾಗಿದೆ.

ಈ) ಮೇಲೆ 'ಇ' ನಲ್ಲಿ ತಿಳಿಸಲಾದ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಇವರನ್ನು ಹುದ್ದೆಗಳಲ್ಲಿ ನಿಯೋಜಿಸುವ ಬಗ್ಗೆ ನಿರ್ಧರಿಸಲಾಗುವುದು.

ವಾಣಿವಿಲಾಸ ಸಾಗರ ಜಲಾಶಯಕ್ಕೆ ಪರ್ಯಾಯ ವ್ಯವಸ್ಥೆಯಿಂದ ನೀರು ಸರಬರಾಜು

2510 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೂರು ವರ್ಷಕ್ಕೂ ಹಿಂದೆ ನಿರ್ಮಿತವಾಗಿರುವ ವಾಣಿವಿಲಾಸ ಸಾಗರ ಜಲಾಶಯದಿಂದ 25 ಸಾವಿರ ವಿಸ್ತೀರ್ಣ ಭೂಮಿಯು ನೀರಾವರಿಯಾಗಿದ್ದು, ಇತ್ತೀಚಿನ ಮಳೆಯ ಅಭಾವದಿಂದ ತುಂಬದೇ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಸಾಗರದ ನೀರನ್ನು ಬೇರೆ ಕಡೆಯಿಂದ ತಂದು ತುಂಬುವಂತೆ ಸರ್ಕಾರವು ಪರ್ಯಾಯ ವ್ಯವಸ್ಥೆ ಕೈಗೊಂಡಿದೆಯೇ? ಹಾಗಿದ್ದಲ್ಲಿ ಅವು ಯಾವುವು?

ಇ) ಹಾಗಿಲ್ಲದಿದ್ದಲ್ಲಿ ಪರ್ಯಾಯ ವ್ಯವಸ್ಥೆಯನ್ನು ಸರ್ಕಾರ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಮತ್ತು ಇ) ಈ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಹೇಮಾವತಿ ಯೋಜನೆಯ ಏತ ನೀರಾವರಿ

431- ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೇಮಾವತಿಯ ಮೂಲ ಯೋಜನೆಯಲ್ಲಿ "ಏತ ನೀರಾವರಿ"ಗೆ ಅವಕಾಶವನ್ನು ಕಲ್ಪಿಸಲಾಗಿತ್ತೆ; ಕಲ್ಪಿಸಿದ್ದಲ್ಲಿ ಅದರ ಸಾಮರ್ಥ್ಯ ಎಷ್ಟು?

ಅ) ಈ ಯೋಜನೆಯಡಿಯಲ್ಲಿ ಈಗ ಕಾರ್ಯ ನಿರ್ವಹಿಸುತ್ತಿರುವ ಏತ ನೀರಾವರಿ ಯೋಜನೆಗಳು ಎಷ್ಟು? ಅವು ಯಾವುವು? ಅದರಲ್ಲಿ ನದಿಯಿಂದ ಮತ್ತು ನಾಲೆಯಿಂದ ಎಷ್ಟು? "ಏತ ನೀರಾವರಿ" ಯೋಜನೆಗಳು ಕೆಲಸ ಮಾಡುತ್ತಿವೆ; ಅವುಗಳ ಸಾಮರ್ಥ್ಯ ಎಷ್ಟು?

ಆ) ಈ ಯೋಜನೆ ಅಡಿಯ ಇನ್ನು ಎಷ್ಟು "ಏತ ನೀರಾವರಿ" ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶ ಇದೆಯೇ? ಅವುಗಳ ವಿವರ ಮತ್ತು ಸಾಮರ್ಥ್ಯ ಎಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೇಮಾವತಿ ಯೋಜನೆಯ ರೂ. 16.3 ಕೋಟಿಗಳ ಮೂಲ ಅಂದಾಜಿನಲ್ಲಿ ಏತ ನೀರಾವರಿಗೆ ಅವಕಾಶವಿರುವುದಿಲ್ಲ. ಹೇಮಾವತಿ ಯೋಜನೆಯ ರೂ 588 ಕೋಟಿಗಳ ಪರಿಷ್ಕೃತ ಅಂದಾಜಿನಲ್ಲಿ (ಆಡಳಿತ ಮಂಜೂರಾತಿ ದೊರೆತಿರುವ) ಏತ ನೀರಾವರಿಗೆ ಅವಕಾಶವಿರುತ್ತದೆ. ಏತ ನೀರಾವರಿ ಮುಖಾಂತರ ಕಲ್ಪಿಸಲುದ್ದೇಶಿಸಿರುವ ನೀರಾವರಿ ಸಾಮರ್ಥ್ಯವು 45,756 ಎಕರೆಗಳಿರುತ್ತದೆ.

ಆ) ಏತ ನೀರಾವರಿ ಯೋಜನೆಗಳು ಇನ್ನೂ ನಿರ್ಮಾಣ ಹಂತದಲ್ಲಿವೆ.

ಇ) ಹೊಸದಾಗಿ ಏತನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಬೇಡಿಕೆಗಳಿರುತ್ತವೆ. ಆದರೆ ನೀರಿನ ಲಭ್ಯತೆಯನ್ನಾಧರಿಸಿ ಹರಿನೀರಾವರಿಗೆ ಪೂರ್ತಿ ಆದ್ಯತೆ ನೀಡಿದ ನಂತರ ಏತನೀರಾವರಿ ಬಗ್ಗೆ ಪರಿಶೀಲಿಸಲಾಗುವುದು.

ಟಿ. ನರಸೀಪುರ ತಾಲ್ಲೂಕಿನ ನೀರಾವರಿ ಯೋಜನೆಗಳು

2222 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಟೀ. ನರಸೀಪುರ ತಾಲ್ಲೂಕಿನಲ್ಲಿ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳೆಷ್ಟು; ಯಾವಾಗ ಮಂಜೂರಾಗಿದೆ; ಇಲ್ಲಿಯವರೆಗೆ ಆಗಿರುವ ಪ್ರಗತಿ ಏನು?

ಆ) ಯಾವಾಗ ಪೂರ್ಣ ಮಾಡಬಹುದು ಪ್ರತಿಯೊಂದು ಯೋಜನೆಯ ಪೂರ್ಣ ವಿವರ ಕೊಡುವುದು;

ಇ) 1995-96 ಸಾಲಿಗೆ ಮಂಜೂರಾಗಿರುವ ಹಣವೆಷ್ಟು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯರು):

ಅ) ಮೂರು

(ಲಕ್ಷ ರೂ.ಗಳಲ್ಲಿ)

	ಮಂಜೂರಾದ ಯೋಜನೆಯ ಹೆಸರು	ಮಂಜೂರಾದ ವರ್ಷ	ಆರ್ಥಿಕ ಪ್ರಗತಿ
1)	ಮುಡುಕು ತೊರೆ ಏತ ನೀರಾವರಿ ಯೋಜನೆ 2ನೇ ಹಂತ	1988-89	14.75
2)	ತಲಕಾಡು ಹತ್ತಿರ ಏತ ನೀರಾವರಿ ಯೋಜನೆ	1988-89	6.75
3)	ಮೇಧಿನಿ ಹತ್ತಿರ ಏತ ನೀರಾವರಿ ಯೋಜನೆ	1988-89	9.10

ಆ) 1997-98ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ (ವಿವರಗಳನ್ನು ಲಗತ್ತಿಸಿದೆ.)